ಜಮಖಂಡಿ ಸರಕಾರಿ ದವಾಖಾನೆಯಲ್ಲಿ ದಂತ ಡಾಕ್ಟರನ್ನು ನೇಮಕ ಮಾಡುವುದು

೯೯೪ ಶ್ರೀ ಗಂ. ಶಿ. ಬಾಗಲಕೋಟೆ (ಜಮಖಂಡಿ) ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.

ಅ) ಜಮಖಂಡಿ ಸರಕಾರಿ ದವಾಖಾನೆಯಲ್ಲಿ ದಂತ ವೈದ್ಯರ ಹುದ್ದೆ ಕಳೆದ ಅನೇಕ ವರುಷಗಳಿಂದ ಖಾಲಿ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಇದರಿಂದ ಜಮಖಂಡಿಯ ಜನತೆಗೆ ತುಂಬಾ ತೊಂದರೆ ಆಗಿದೆ ಎಂಬ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಜಮಖಂಡಿ ದವಾಖಾನೆಗೆ ದಂತ ವೈದ್ಯರನ್ನು ನೇಮಿಸಲು ಸರಕಾರದವರು ತೀಘ್ರ ಕ್ರಮ ಕೈಗೊಳ್ಳುವರೇ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ಬಂದಿದೆ

ಆ) ಹೌದು

ಇ) ತೆಗೆದುಕೊಳ್ಳಲಾಗುವುದು.

ಕುಂದಾಪುರದಲ್ಲಿ ರೋಗಿಗಳನ್ನು ಸಾಗಿಸುವ ವಾಹನದ ಅವಶ್ಯಕತೆ

೧೧೩೭ ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕುಂದಾಪುರದಲ್ಲಿ ರೋಗಿಗಳನ್ನು ಸಾಗಿಸುವ ವಾಹನಗಳು ಇವೆಯೇ ?

ಆ) ಇದ್ದರೆ ಅವುಗಳು ಯಾವ ಸ್ಥಿತಿಯಲ್ಲಿವೆ ಮತ್ತು ಈಗ ಕಾರ್ಯ ನಿರ್ವಹಿಸುತ್ತಿವೆಯೇ ?

ಇ) ಹಾಗಿಲ್ಲದಿದ್ದಲ್ಲಿ ಎಂದು ಅವುಗಳನ್ನು ಸರಿಪಡಿಸಲಾಗುವುದು ?

ಈ) ಈ ತಾಲ್ಲೂಕು ಕೇಂದ್ರವಾದ ಕಾರಣ ಇವುಗಳ ಅಗತ್ಯತೆ ಇದೆ ಎಂದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ಒಂದು ಆಂಬ್ಯುಲೆನ್ಸ್ ವಾಹನವನ್ನು ಒದಗಿಸಲಾಗಿದೆ.

ಆ) ಅದಕ್ಕೆ ದೊಡ್ಡ ರಿಪೇರಿಯಾಗಬೇಕಿದ್ದು ಈಗ ಅದು ಕಾರ್ಯ ನಿರ್ವಹಿಸುತ್ತಿಲ್ಲ. ಈಗ ಅದು ಬೆಂಗಳೂರಿನ ಕೇಂದ್ರ ಕಾರ್ಯಾಗಾರದಲ್ಲಿದೆ.

ಇ) ವಾಹನದ ದುರಸ್ತಿ ಕಾರ್ಯವು ಮುಗಿಯುತ್ತಾ ಬಂದಿದ್ದು ಇನ್ನು ಒಂದು ವಾರದೊಳಗೆ ಅದನ್ನು ಕುಂದಾಪುರಕ್ಕೆ ಕಳುಹಿಸುವ ನಿರೀಕ್ಷೆಯಿದೆ.

ಈ) ಹೌದು

Telephone expenditure incurred by Ministers

897 Sri MALLIKARJUNA V. BANNI (Guledgud) Will the Chief Minister be pleased to state.

1. Whether it has come to the notice of the Government that the expenditure on Telephone charges of the present Ministers is very high.